ನಂಬರ್.	ದಸ್ತಾವೇಜು ಬರಿಸುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
81	ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಟಿಕೆರೆಲಿರುವ ತೆಲಗುಬಣಜಿಗರ ಜಾತಿಸೂಳೇರ ತಿಮ್ಮನ ಮಗ ವೆಂಕಟರಮಣ.	ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ಇರುವ ತೆಲಗುಬಣಜಿಗರ ಜಾತಿ ಕಾಳಮ್ಮನ ಮಗ ಪೋಲಿಸ್‌ಜವಾನ ವೆಂಕಟರಾಮಯ್ಯ	12—1—83	12—1—83	(50) ರೂಪಾಯಿನ ಜಮ್ಮಿ ಕ್ರಯ ಪತ್ರ.
82—83					

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 17ನೇ ಏಪ್ರಿಲ್ 1885.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಶಿವಮೊಗ್ಗ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತೀ ಬಾಬತು ಇದರಡಿ ಕಂಡ ನಾಟಾಗಳು ಫಾರೆಸ್ಟು ಅಸಿಸ್ಟೆಂಟ್ ಕಣಸರವೇಟರವರಿಂದ ಈ ಕೆಳಗೆ ನಮೂದಾದ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಹರಾಜು ನಡಿಯತಕ್ಕ ಸ್ಥಳ.	ಹರಾಜು ತಾರೀಖು.	ತೇಗದ ನಾಟಾಗಳು.	ಕಾಡಜಾತಿ ನಾಟಾಗಳು.	ತೇಗ ಮತ್ತು ಕಾಡುಮರದ ಪೊಲಿಗಳು.	ಜುಮ್ಲಾ.
ಲಕ್ಕುವಳ್ಳಿ ..	26ನೇ ಮೇ 1885	1,000	500	100	1,600
ಕಣಬೂರು ..	1ನೇ ಜೂಡಿಟೋ	600	400	0	1,000
ಆಯನೂರು ..	6ನೇ ಜೂಡಿಟೋ	50	150	250	450
ಶಿವಮೊಗ್ಗ ..	10ನೇ ಜೂಡಿಟೋ	200	300	350	850

ಹರಾಜಿನ ಷರತ್ತುಗಳು—ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂ 12ನೇ ಮತ್ತೂಂ 20ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕಂಡ ಪ್ರಕಾರ ಇರತಕ್ಕವು, ಮತ್ತು ಹರಾಜು ಕಾಲದಲ್ಲಿ ಓದಲ್ಪಡುವವು.

ಇ. ಪಿ. ಲವ್‌ರೀ,
ಫಾರೆಸ್ಟ್ ಅಸಿ ಕಣಸರವೇಟರ್.

ಸ್ಯ 1885ನೇ ಇಸವಿ ಮಾರ್ಚಿ ತಿಂಗಳ ಕಾಲಸ್ಥಿತಿ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಬೆಂಗಳೂರು ಹೆಡ್ ಕ್ವಾರ್ಟರ್ಸ್‌ನಲ್ಲಿ 70 ಸೆಂಟ್ಸ್ ಮಳೆ ಅಳೆಯಲ್ಪಟ್ಟಿರುತ್ತೆ. ಡಿಸ್ಟ್ರಿಕ್ಟಾ ಮುಳ್ಳೆ ಸಾಧಾರಣವಾಗಿ ಸ್ವಲ್ಪ ಮಳೆ ಆಗಿರುತ್ತೆ.

ಫಸಲ್ ಸ್ಥಿತಿ—ಪೈರಿನಲ್ಲಿರುವ ವೈಶಾಖಿ ಭತ್ತ ಮತ್ತು ಗನ್ನಾ ಫಸಲ್‌ಗಳು ನೀರಿಲ್ಲದೆ ಬಾಡುತ್ತಲಿವೆಂದು ರಿಪೋರ್ಟಾಗಿರುತ್ತೆ. ಗನ್ನಾ ಮತ್ತು ಕೆಲವು ಸ್ಥಳಗಳಲ್ಲಿ ಭತ್ತಾ ಸಹ ಕಟಾವಾದವು.

ಜನಾರೋಗ್ಯ—ಚನ್ನಾಗಿಫೆ.

ಜನಮರಣ – ಫಿಬ್ರುವರೀ ತಿಂಗಳಲ್ಲಿ 482 ಮಂದಿ ಹೋಗಿರುತ್ತಾರೆ. ಅದರ ಹಿಂದಿನ ತಿಂಗಳಲ್ಲಿ 651 ಮಂದಿ ಹೋಗಿರುವರು. ಅದರಿಂದ ಫಿಬ್ರುವರೀ ತಿಂಗಳಲ್ಲಿ 169 ಕಮ್ಮಿಯಾಗಿರುತ್ತೆ.

ಕಾಲ್ನಡೆ—ಹಿಂದಿನ ತಿಂಗಳಲ್ಲಿ 2,002 ಕಾಲ್ನಡೆಗಳು ಹೋದವು. ಈ ಮಾಪಿಯೊಳಗೆ 2,472 ಹೋಗಿರುತ್ತೆ, ಆ ಪೈಕೀ 324 ಕಾಲ್ನಡೆಗಳು ದುಷ್ಟ ಮೃಗಗಳಿಂದ ಕೊಲ್ಲಲ್ಪಟ್ಟಿರುತ್ತೆ.

ಜಮ್ಮಾಗಳು—ರೂಪಾಯಿ 618—15—0 ಕಂದಾಯುಳ್ಳವು ಜಮ್ಮಾನು ಸಾಗುವಳಿ ಬಗ್ಗೆ ತೆಗದುಕೊಳ್ಳಲ್ಪಟ್ಟಿರುತ್ತೆ. ನೂರುಮುವ್ವತ್ತು ರೂಪಾಯಿ ಕಂದಾಯವುಳ್ಳ ಜಮ್ಮಾ ರಾಜೀನಾಮೆ ಕೊಡಲ್ಪಟ್ಟಿರುತ್ತೆ.

ಯಲ್. ರಿಕೆಟ್ಸ್,
ಜಿಲ್ಲೃಟಿ ಕಮ್ಮಿಷನರ್.

ಮೈಸೂರ ಗೆಜೆಟ್, ಚಂದಾದರ ವಗೈರೇ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸದಾ 12 ತಿಂಗಳಿಗೆ	7 0	3 8

ಫಸ್ಟ್ ಮಾಹೆ ಯಾ ಕ್ವಾರಟರಿಗೆ ದಾನಾಷಾಯೆ ಪ್ರಕಾರ ದರಗಳು.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಅಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟೀಸುಗಳು :— ರೂ. ಆ.

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ)	..		2 8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	..	..	1 4

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 374ನೇ ಸೆಕ್ಷನ್ ಅನುಸರಿಸಿ, ದಿವಾಣೀ ಅಪ್ಲಿಕೇಷನ್‌ಗಳ ಬಗ್ಗೆ ನೋಟೀಸುಗಳಿಗೆ :—

ಮೊದಲನೇ ದಫಾ	..	..	5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	..	2 8

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಣಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಫೀವಬ್ಬೇ, ವಗೈರೇ ಕೊಡುವ ಬಗ್ಗೆ ರವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸುಗಳಿಗೆ :—

ಮೊದಲನೇ ಸಲಕ್ಕೆ	..	ಪುಟ 1ಕ್ಕೆ ..	0 1
ಯಿರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ		,, ..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಚ್ಚಿ 1ಕ್ಕೆ ..	0 8
ಯಿರಡನೇ ದಫಾ	ಡಿಟೋ	ಡಿಟೋ ..	0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		.. ..	0 4

ಬನೋಜೀವ್ ಹುಕ್ಕುಂ,
ಹೆಚ್. ಹಡಿನ್ಸ್,
ಮೈ. ಗೆ. ಕಂಪೈಲರ್.

Mysore Government Press, Bangalore.—1885.